# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : **1248**
ಸದಸ್ಯರ ಹೆಸರು : ಶ್ರೀ ಮಾನೆ ಶ್ರೀನಿವಾಸ
(ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸಬೇಕಾದ ದಿನಾಂಕ : 22.09.2021
ಉತ್ತರಿಸುವ ಸಚಿವರು : ಮಾನ್ಯ ಕಂದಾಯ ಸಚಿವರು

| | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯಾದ್ಯಂತ ಇತ್ತೀಚೆಗೆ ಸುರಿದ ಭಾರಿ ಮಳೆಯಿಂದಾಗಿ ಧಾರವಾಡ, ಗದಗ ಹಾಗೂ ಹಾವೇರಿ ಜಿಲ್ಲೆಗಳಲ್ಲಿ ಉಂಟಾದ ಬೆಳೆ ಹಾನಿ, ಮನೆಹಾನಿ , "ಜೀವಹಾನಿ" ಹಾಗೂ ಪ್ರಾಣಿ ಜೀವ ಹಾನಿಗಳ ಅಂಕಿ ಸಂಖ್ಯೆ ಎಷ್ಟು; (ತಾಲ್ಲೂಕುವಾರು ಮಾಹಿತಿ ನೀಡುವುದು) | ಇತ್ತೀಚೆಗೆ ಸುರಿದ ಭಾರಿ ಮಳೆಯಿಂದಾಗಿ ಧಾರವಾಡ, ಗದಗ ಹಾಗೂ ಹಾವೇರಿ ಜಿಲ್ಲೆಗಳಲ್ಲಿ ಉಂಟಾದ ಬೆಳೆ ಹಾನಿ, ಮನೆಹಾನಿ , "ಜೀವಹಾನಿ" ಹಾಗೂ ಪ್ರಾಣಿ ಜೀವ ಹಾನಿಗಳ ಅಂಕಿ ಅಂಶಗಳ ತಾಲ್ಲೂಕುವಾರು ವಿವರಗಳನ್ನು **ಅನುಬಂಧ-1** ರಲ್ಲಿ ಒದಗಿಸಿದೆ. |
| (ಆ) | ರಾಜ್ಯಾದ್ಯಂತ ಇತ್ತೀಚೆಗೆ ಸುರಿದ ಭಾರಿ ಮಳೆಯಿಂದಾಗಿ ಧಾರವಾಡ, ಗದಗ ಹಾಗೂ ಹಾವೇರಿ ಜಿಲ್ಲೆಗಳಲ್ಲಿ ಉಂಟಾದ ಬೆಳೆಹಾನಿ, ಮನೆಹಾನಿ, ಜೀವಹಾನಿ ಹಾಗೂ ಪ್ರಾಣಿ ಜೀವ ಹಾನಿಗೊಳಗಾದ ಸಂತ್ರಸ್ತರಿಗೆ ಸರ್ಕಾರದಿಂದ ಪರಿಹಾರ ಧನವನ್ನು ಒದಗಿಸಲಾಗಿದೆಯೇ; (ತಾಲ್ಲೂಕುವಾರು ಮಾಹಿತಿಯನ್ನು ಒದಗಿಸುವುದು) | ಧಾರವಾಡ ಜಿಲ್ಲೆಯಲ್ಲಿ ಇತ್ತೀಚೆಗೆ ಸುರಿದ ಭಾರಿ ಮಳೆಯಿಂದಾಗಿ ಉಂಟಾದ ಬೆಳೆಹಾನಿ ಹಾಗೂ ಮನೆ ಹಾನಿ ವಿವರಗಳನ್ನು ಸಂಬಂಧಪಟ್ಟ ತಂತ್ರಾಂಶದಲ್ಲಿ ಅಳವಡಿಸಲಾಗುತ್ತಿದೆ. ಮಾನವ ಜೀವಹಾನಿಗೆ ರೂ.5.00 ಲಕ್ಷ ಹಾಗೂ ಜಾನುವಾರು ಜೀವ ಹಾನಿಗೆ (23 ಕುರಿ/ಮೇಕೆಗಳು) ತಲಾ ರೂ.3000/-ಗಳಂತೆ ಒಟ್ಟು ರೂ.69,000/- ಪಾವತಿಸಲಾಗಿದೆ.<br><br>ಗದಗ ಜಿಲ್ಲೆಯಲ್ಲಿ ಇತ್ತೀಚೆಗೆ ಸುರಿದ ಭಾರಿ ಮಳೆಯಿಂದಾಗಿ ಉಂಟಾದ ಬೆಳೆಹಾನಿ ಹಾಗೂ ಮನೆ ಹಾನಿ ವಿವರಗಳನ್ನು ಸಂಬಂಧಪಟ್ಟ ತಂತ್ರಾಂಶದಲ್ಲಿ ಅಳವಡಿಸಲಾಗುತ್ತಿದ್ದು, ಈವರೆಗೆ ಮನೆ ಹಾನಿಗೆ ರೂ.12.76 ಲಕ್ಷಗಳನ್ನು, ಮಾನವ ಜೀವಹಾನಿಗೆ ತಲಾ ರೂ.5.00 ಲಕ್ಷದಂತೆ ಒಟ್ಟು ರೂ.15.00 ಲಕ್ಷ ಹಾಗೂ ಜಾನುವಾರು ಜೀವ ಹಾನಿಗೆ (ಎತ್ತು-2, ಆಕಳು-1) ರೂ.80,000/- ಪಾವತಿಸಲಾಗಿದೆ.<br><br>ಹಾವೇರಿ ಜಿಲ್ಲೆಯಲ್ಲಿ ಇತ್ತೀಚೆಗೆ ಸುರಿದ ಭಾರಿ ಮಳೆಯಿಂದಾಗಿ ಉಂಟಾದ ಬೆಳೆಹಾನಿ ಹಾಗೂ ಮನೆ ಹಾನಿ ವಿವರಗಳನ್ನು ಸಂಬಂಧಪಟ್ಟ ತಂತ್ರಾಂಶದಲ್ಲಿ ಅಳವಡಿಸಲಾಗುತ್ತಿದ್ದು, ಈವರೆಗೆ ಮನೆ ಹಾನಿಗೆ ರೂ.264.92 ಲಕ್ಷಗಳನ್ನು, ಮಾನವ ಜೀವಹಾನಿಗೆ ರೂ.5.00 ಲಕ್ಷ ಹಾಗೂ ಜಾನುವಾರು ಜೀವ ಹಾನಿಗೆ (ಎತ್ತು-1, ಆಕಳು-2) ರೂ.85,000/- ಪಾವತಿಸಲಾಗಿದೆ. |

(ಇ) ಸಂತ್ರಸ್ಥರಿಗೆ ಪರಿಹಾರ ಧನ ಒದಗಿಸಲು ವಿಳಂಬವಾಗಿದ್ದಲ್ಲಿ, ಅದಕ್ಕೆ ಕಾರಣವೇನು; ಹಾಗೂ ಪರಿಹಾರಧನ ಒದಗಿಸಲು ಬೇಕಾಗುವ ಕಾಲಮಿತಿ ಎಷ್ಟು?

ಅತಿವೃಷ್ಟಿ/ಪ್ರವಾಹದಿಂದ ಉಂಟಾಗಿರುವ ಹಾನಿಗೆ ಕೇಂದ್ರ ಸರ್ಕಾರದ NDRF ಮಾರ್ಗಸೂಚಿಯನ್ವಯ ರೂ.765.84 ಕೋಟಿ ನೆರವು ಕೋರಿ ದಿನಾಂಕ:21.08.2021ರಂದು ಮೆಮೊರಾಂಡಮ್ ಸಲ್ಲಿಸಲಾಗಿತ್ತು. ತದನಂತರ ಕಲಬುರ್ಗಿ ಮತ್ತು ಬೀದರ್ ಜಿಲ್ಲೆಗಳಲ್ಲಿ ಬಿದ್ದಂತಹ ಭಾರಿ ಮಳೆ ಹಾಗೂ ಪ್ರವಾಹದಿಂದ ಉಂಟಾದ ಹಾನಿಯನ್ನು ಪರಿಗಣಿಸಿ ಒಟ್ಟು ರೂ.841.57 ಕೋಟಿ ಆರ್ಥಿಕ ನೆರವು ಕೋರಿ ದಿನಾಂಕ:18.09.2021 ರಂದು ಕೇಂದ್ರ ಸರ್ಕಾರಕ್ಕೆ ಪರಿಷ್ಕೃತ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ.

ಇದರನ್ವಯ ಕೇಂದ್ರದಿಂದ 7 ಜನರ ಕೇಂದ್ರ ಅಧ್ಯಯನ ತಂಡ ದಿ:04.09.2021ರಿಂದ ದಿ:07.09.2021ರವರೆಗೂ ರಾಜ್ಯಕ್ಕೆ ಭೇಟಿ ನೀಡಿರುತ್ತದೆ. ಕೇಂದ್ರ ಸರ್ಕಾರದಿಂದ ಆರ್ಥಿಕ ಸಹಕಾರ ನಿರೀಕ್ಷಿಸಲಾಗಿದೆ.

ಪ್ರವಾಹ ಪರಿಹಾರಕ್ಕಾಗಿ ಇಲ್ಲಿಯವರೆಗೆ ಕೆಳಕಂಡಂತೆ ವೆಚ್ಚ ಭರಿಸಲಾಗಿದೆ.

| ಕ್ರ. ಸಂ | ವಿಷಯ | ವೆಚ್ಚ (Rs.lakhs) |
|---|---|---|
| 1 | Ex gratia (ಮಾನವಹಾನಿ) | 80.00 |
| 2 | ಪ್ರಾಣಿಹಾನಿ | 51.79 |
| 3 | Gratuitous Relief @10,000 per family | 8176.00 |
| 4 | ಪ್ರವಾಹ ತುರ್ತು ಪರಿಹಾರಕ್ಕಾಗಿ | 2185.70 |
| 5 | ಬೆಳೆ ಹಾನಿ ಇನ್‌ಪುಟ್ ಸಬ್ಸಿಡಿ | 3864.26 |
| 6 | ಮನೆ ಪರಿಹಾರ | 1107.59 |
| | **ಒಟ್ಟು** | **15465.34** |

*ಕಂಇ 421 ಟಿಎನ್‌ಆರ್ 2021*

(ಆರ್.ಅಶೋಕ)
ಕಂದಾಯಸಚಿವರು

ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಮಾನೆ ಶ್ರೀನಿವಾಸ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) ಇವರು ಮಂಡಿಸಿರುವ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 1248 ಕ್ಕೆ **ಅನುಬಂಧ-1**

## ಬೆಳೆ ಹಾನಿ, ಮನೆಹಾನಿ, ಜೀವಹಾನಿ ಹಾಗೂ ಪ್ರಾಣಿ ಜೀವ ಹಾನಿಗಳ ವಿವರ

### ಧಾರವಾಡ

| ತಾಲ್ಲೂಕಿನ ಹೆಸರು | ಬೆಳೆ ಹಾನಿ (ಹೆ.ಗಳಲ್ಲಿ) | ಮನೆಹಾನಿ | ಮಾನವ ಜೀವಹಾನಿ | ಪ್ರಾಣಿ ಜೀವ ಹಾನಿ |
|---|---|---|---|---|
| ಧಾರವಾಡ | 3791.82 | 548 | 01 | - |
| ಅಳ್ನಾವರ | 1458.2 | 40 | - | - |
| ಹುಬ್ಬಳ್ಳಿ | 1020 | 122 | - | - |
| ಹುಬ್ಬಳ್ಳಿ ನಗರ | 3.00 | 43 | - | - |
| ಕಲಘಟಗಿ | 42205.36 | 155 | - | - |
| ಕುಂದಗೋಳ | 4476.00 | 277 | - | - |
| ನವಲಗುಂದ | 8360.00 | 95 | - | 23 |
| ಅಣ್ಣಿಗೇರಿ | 181.00 | 60 | - | - |
| **ಒಟ್ಟು** | **23515.38** | **1340** | **01** | **23** |

### ಗದಗ

| ತಾಲ್ಲೂಕಿನ ಹೆಸರು | ಬೆಳೆ ಹಾನಿ (ಹೆ.ಗಳಲ್ಲಿ) | ಮನೆಹಾನಿ | ಮಾನವ ಜೀವಹಾನಿ | ಪ್ರಾಣಿ ಜೀವ ಹಾನಿ |
|---|---|---|---|---|
| ಗದಗ | - | 115 | - | - |
| ಗಜೇಂದ್ರಗಡ | - | 03 | - | - |
| ಲಕ್ಮೇಶ್ವರ | - | 119 | - | - |
| ಮುಂಡರಗಿ | - | 12 | - | - |
| ನರಗುಂದ | 3135.31 | 129 | - | - |
| ರೋಣ | 5461.35 | 50 | - | 01 |
| ಶಿರಹಟ್ಟಿ | - | 26 | 03 (ಸಿಡಿಲು) | 02 |
| **ಒಟ್ಟು** | **8596.66** | **450** | **03** | **03** |

### ಹಾವೇರಿ

| ತಾಲ್ಲೂಕಿನ ಹೆಸರು | ಬೆಳೆ ಹಾನಿ (ಹೆ.ಗಳಲ್ಲಿ) | ಮನೆಹಾನಿ | ಮಾನವ ಜೀವಹಾನಿ | ಪ್ರಾಣಿ ಜೀವ ಹಾನಿ |
|---|---|---|---|---|
| ಹಾವೇರಿ | 3455.58 | 357 | | |
| ರಾಣೆಬೆನ್ನೂರು | 559.04 | 137 | 01 | -- |
| ಬ್ಯಾಡಗಿ | 32.20 | 84 | - | - |
| ಹಿರೇಕೆರೂರು | 664.50 | 156 | - | - |
| ರಟ್ಟಿಹಳ್ಳಿ | 492.60 | 192 | - | - |
| ಸವಣೂರು | 2256.90 | 253 | - | 02 |
| ಶಿಗ್ಗಾಂವ್ | 1006.70 | 1092 | - | - |
| ಹಾನಗಲ್ | 750.00 | 476 | - | 01 |
| **ಒಟ್ಟು** | **9217.52** | **2747** | **01** | **03** |